C.R.P.67

Form No.4 (Civil)
Deposition Sheets
(R.P.No.57)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಎಸ್ ಸಿ ಸಂಖ್ಯೆ: **31/2015**

ಪ್ರಾಸಾ. **18** ಚಾಸಾ. **21**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಲ್ಲಗೊಂಡಿ ಎಸ್ ಬಿ |
| ತಂದೆಯ ಹೆಸರು | : | ಭೀಮಣ್ಣ |
| ವಯಸ್ಸು | : | 52 ವರ್ಷಗಳು |
| ಉದ್ಯೋಗ | : | ಎ ಎಸ್ ಐ, ಮಾದನಾಯಕನಹಳ್ಳಿ ಪೋಲೀಸ್ ಠಾಣೆ. |
| ವಾಸ | : | ಮಾದನಾಯಕನಹಳ್ಳಿ. |

ಪ್ರಮಾಣ ವಚನ ಬೋಧಿಸಿದ ದಿನಾಂಕ: **04.03.2026.**

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕ 20.02.2013 ರಿಂದ ದಿನಾಂಕ 30.10.2016ರ ವರೆಗೆ ನೆಲಮಂಗಲ ವೃತ್ತ ನಿರೀಕ್ಷಕರ ಬಳಿ ಅಪರಾಧ ಪತ್ತೆ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿನಾಂಕ 13.07.2014ರಂದು ನನಗೆ ಹಾಗೂ ಪಿ ಸಿ ನಾರಾಯಣಸ್ವಾಮಿ ರವರಿಗೆ ದಾಬಾಸ್ ಪೇಟೆ ಠಾಣಾ ಗುನ್ನೆ ಸಂಖ್ಯೆ 35/2014 ಕಲಂ 395 ಐ ಪಿಸಿ ಹಾಗೂ ಠಾಣಾ ಗುನ್ನೆ ಸಂಖ್ಯೆ 36/2014 ಕಲಂ 302 ಐಪಿಸಿ ಪ್ರಕರಣದಲ್ಲಿ ತಲೆ ಮರೆಸಿಕೊಂಡಿರುವ ಆರೋಪಿ ರಾಜು ರವರ ಪತ್ತೆಗೆ ನೇಮಕ ಮಾಡಿದ್ದು ಅದರಂತೆ ನಾವುಗಳು ವಿಜಯನಗರ, ಗಿರಿನಗರ, ಬನಶಂಕರಿ, ಎಲಚೇನಹಳ್ಳಿ ಸ್ಥಳಗಳಿಗೆ ಹೋಗಿ ಆರೋಪಿ ರಾಜು ಬಗ್ಗೆ ಬಾತ್ಮಿದಾರರನ್ನು ಕಂಡು ಮಾಹಿತಿ ಸಂಗ್ರಹಿಸಲಾಗಿ, ಆರೋಪಿ ರಾಜು ತನ್ನ ಅಕ್ಕ ಹಾಗೂ ತಾಯಿಯವರ ಮನೆಯಲ್ಲಿರುವ ಬಗ್ಗೆ ಮಾಹಿತಿ ಬಂದಿದ್ದು, ಅದರಂತೆ ನಾವುಗಳು ದಿನಾಂಕ 14.07.2014 ರಂದು ಬೆಳಗ್ಗೆ 9-00 ಗಂಟೆ ಸಮಯದಲ್ಲಿ ಕಾರ್ಮೆಲ್ ಜ್ಯೋತಿ

ಹಿಂಭಾಗದ ಅವರ ಅಕ್ಕನ ಮನೆಯಲ್ಲಿದ್ದ ಆರೋಪಿ ರಾಜುವನ್ನು ಹಿಡಿದು ವಿಚಾರ ಮಾಡಲಾಗಿ ಆರೋಪಿ ಟಾಟಾ ಮ್ಯಾಜಿಕ್ ವಾಹನವನ್ನು ಕೃತ್ಯಕ್ಕೆ ಬಳಸಿಕೊಂಡಿರುವ ಬಗ್ಗೆ ಒಪ್ಪಿಕೊಂಡಿದ್ದು, ಹೆಚ್ಚಿನ ವಿಚಾರಣೆಗಾಗಿ ನೆಲಮಂಗಲ ಸಿಪಿಐ ರವರ ಮುಂದೆ ಸದರಿ ಆರೋಪಿ ರಾಜುವನ್ನು ಬೆಳಗ್ಗೆ 11-45 ಗಂಟೆ ಸುಮಾರಿಗೆ ಕರೆತಂದು ಹಾಜರುಪಡಿಸಿ ವರದಿ ನೀಡಿರುತ್ತೇವೆ. ಸದರಿ ಆರೋಪಿ ರಾಜುವನ್ನು ನೋಡಿದರೆ ಗುರುತಿಸಬಲ್ಲೆ. ಆತ ಈ ದಿನ ನ್ಯಾಯಾಲಯದಲ್ಲಿ ಆರೋಪಿ ಕಟಕಟೆಯಲ್ಲಿ ಮಧ್ಯದಲ್ಲಿ ಕುಳಿತಿದ್ದಾನೆ. ನನಗೆ ಈಗ ತೋರಿಸಿದ ದಾಖಲೆಯ ನಾನು ನೀಡಿರುತ್ತೇನೆ ಎನ್ನಲಾದ ವರದಿಯಾಗಿದ್ದು ಸದರಿ ವರದಿಯನ್ನು ಈಗ ನನ್ನಿಂದ ನಿ.ಪಿ-**55** ಎಂದು ಗುರುತಿಸಲಾಯಿತು.

2. ದಿನಾಂಕ 24.07.2014 ರಂದು ಟಾಟಾ ಮ್ಯಾಜಿಕ್ ವಾಹನವನ್ನು ವಶಪಡಿಸಿಕೊಂಡು ಹಾಜರುಪಡಿಸುವಂತೆ ವೃತ್ತ ನಿರೀಕ್ಷಕರು ನಮಗೆ ಆದೇಶಿಸಿದ್ದು, ಅದರಂತೆ ಟಾಟಾ ಮ್ಯಾಜಿಕ್ ವಾಹನವನ್ನು ಮೈಸೂರಿನ ಟಾಟಾ ಫೈನಾನ್ಸ್ ಸಂಸ್ಥೆಯವರ ವಶದಲ್ಲಿರುವುದಾಗಿ ತಿಳಿದು ನಾನು ಮತ್ತು ನಾರಾಯಣಸ್ವಾಮಿ ರವರು ಮೈಸೂರಿನ ಸದರಿ ಟಾಟಾ ಫೈನಾನ್ಸ್ ಸಂಸ್ಥೆಗೆ ಹೋಗಿ ಸದರಿ ಅಧಿಕಾರಿಗೆ ಸದರಿ ವಾಹನವು ಕೃತ್ಯದಲ್ಲಿ ಭಾಗಿ ಆಗಿರುವುದಾಗಿ ಪತ್ರ ಮುಖೇಣ ತಿಳಿಸಿ ಸದರಿ ವಾಹನವನ್ನು ವಶಪಡಿಸಿಕೊಳ್ಳಬೇಕಾಗಿ ಕೇಳಿದಾಗ ಅವರು ವಾಹನವನ್ನು ನಮ್ಮ ವಶಕ್ಕೆ ನೀಡಲು ನಿರಾಕರಿಸಿ ಒಂದು ಪತ್ರ ನೀಡಿರುತ್ತಾರೆ. ಸದರಿ ಪತ್ರವನ್ನು ವರದಿಯೊಂದಿಗೆ ವೃತ್ತ ನಿರೀಕ್ಷಕರಿಗೆ ನೀಡಿರುತ್ತೇವೆ. ವಾಹನವನ್ನು ನಾವು ಮೈಸೂರಿನ ನಿಸರ್ಗ ಯಾರ್ಡ್ ನಲ್ಲಿ ನೋಡಿದ್ದೆವು. ನಾನು ಫೈನಾನ್ಸ್ ಸಂಸ್ಥೆಯವರಿಂದ ಸ್ವೀಕರಿಸಿದ ಪತ್ರವು ಈಗಾಗಲೇ ನಿ.ಪಿ-52 ಎಂದು ಗುರುತಿಸಲಾಗಿದೆ. ನಿಪಿ-52 ರ ತತ್ಸಂಬಧದ ವರದಿಯನ್ನು ನನ್ನಿಂದ ಈಗ ನಿ.ಪಿ-**57** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಸಿಆರ್ ವಕೀಲರಿಂದ **6** ನೇ ಆರೋಪಿತರ ಪರವಾಗಿಃ

ಪ್ರಶ್ನೆಃ ದಿನಾಂಕ 13.07.2014 ರಂದು ನಿಮ್ಮನ್ನು ಯಾವ ಸಮಯಕ್ಕೆ ಈ ಪ್ರಕರಣದ ಕರ್ತವ್ಯಕ್ಕೆ ನಿಯೋಜಿಸಲಾಯಿತು?

ಉತ್ತರಃ ಬೆಳಗ್ಗೆ 8-00 ಗಂಟೆಗೆ.

ಪ್ರಶ್ನೆಃ ಲಿಖಿತವಾಗಿ ನಿಯೋಜಿಸಿದರೋ ಅಥವಾ ಮೌಖಿಕವಾಗಿ ನಿಯೋಜಿಸದರೋ?

ಉತ್ತರಃ ಮೌಖಿಕವಾಗಿ ನಿಯೋಜಿಸದ್ದರು.

ಪ್ರಶ್ನೆಃ ಆರೋಪಿಯ ಹೆಸರು ರಾಜ ಎಂಬುದನ್ನು ಹೊರತುಪಡಿಸಿ ಆತ ಯಾವ ಊರು ಎಂಬಿತ್ಯಾದಿಗಳ ಬಗ್ಗೆ ನಿಮಗೆ ಮಾಹಿತಿ ಇರಲಿಲ್ಲ?

ಉತ್ತರಃ ಇಲ್ಲ ಮಾಹಿತಿ ಇತ್ತು.

ಪ್ರಶ್ನೆಃ ಆರೋಪಿಯ ಬಗ್ಗೆ ಆರೋಪಿಯ ಭಾವಚಿತ್ರವಾಗಲೀ ಅಥವಾ ಆತನ ಚಹರೆಯಾಗಲೀ ನಿಮಗೆ ತಿಳಿದಿರಲಿಲ್ಲ?

ಉತ್ತರಃ ನಮಗೆ ಬಾತ್ಮಿದಾರರು ಮಾಹಿತಿ ನೀಡಿದ್ದರು.

ಪ್ರಶ್ನೆಃ ನೀವು ದಿನಾಂಕ 13.07.2014 ರ ಯಾವ ಸಮಯಕ್ಕೆ ಕಾರ್ಮೆಲ್ ಜ್ಯೋತಿ ಶಾಲೆಯ ಬಳಿ ಹೋಗಿದ್ದಿರಿ?

ಉತ್ತರಃ ಸಂಜೆ 4-00 ರ ಸಮಯಕ್ಕೆ ಹೋಗಿದ್ದೆವು.

ಪ್ರಶ್ನೆಃ ನೀವು ದಿನಾಂಕ 13.07.2014 ರಂದು ಎಲ್ಲಿ ತಂಗಿದ್ದಿರಿ?

ಉತ್ತರಃ ಸಮೀಪದ ಲಾಡ್ಜ್ ನಲ್ಲಿ ತಂಗಿದ್ದೆವು.

ಪ್ರಶ್ನೆಃ ಲಾಡ್ಜ್ ಹೆಸರೇನು?

ಉತ್ತರಃ ಈಗ ಉತ್ತರಿಸಲಾರೆ ಕಾರಣ ಮರೆತಿದ್ದೇನೆ.

ಪ್ರಶ್ನೆ: ಲಾಡ್ಜ್ ನಲ್ಲಿ ನೀವು ತಂಗಿದ್ದ ಬಾಬ್ತು ರಸೀದಿಯನ್ನು ಪಡೆದಿರುವಿರಾ?

ಉತ್ತರ: ಇಲ್ಲ ಪುಸ್ತಕ ಯಾದಿಯಲ್ಲಿ ಬರೆದುಕೊಂಡಿರುತ್ತಾರೆ.

ಪ್ರಶ್ನೆ: ನಿ.ಪಿ-55 ರ ವರದಿಯಲ್ಲಿ ನೀವು ಲಾಡ್ಜ್ ನಲ್ಲಿ ತಂಗಿದ್ದ ಬಾಬ್ತು ತಿಳಿಸಿರುವಿರಾ?

ಉತ್ತರ: ತಿಳಿಸಿಲ್ಲ.

ಪ್ರಶ್ನೆ: ಲಾಡ್ಜ್ ನ ಯಾವ ಸಂಖ್ಯೆಯ ಕೋಣೆಯಲ್ಲಿ ತಂಗಿದ್ದಿರಿ?

ಉತ್ತರ: ನೆನಪಿಲ್ಲ.

ಪ್ರಶ್ನೆ: ನೀವು ಎಷ್ಟು ಬಾಡಿಗೆಯನ್ನು ನೀಡಿದ್ದಿರಿ?

ಉತ್ತರ: ನೆನಪಿಲ್ಲ.

ಪ್ರಶ್ನೆ: ನೀವು ಉಲ್ಲೇಖಿಸಿದ ಕಾರ್ಮೆಲ್ ಜ್ಯೋತಿ ಶಾಲೆಯ ಆಸುಪಾಸು ಯಾವುದೇ ಲಾಡ್ಜ್ ಗಳು ಇರುವುದಿಲ್ಲ?

ಉತ್ತರ: ನಿಮ್ಮ ಸೂಚನೆ ತಪ್ಪು.

ಪ್ರಶ್ನೆ: ನೀವು ಲಾಡ್ಜ್ ನಲ್ಲಿ ಉಳಿದುಕೊಂಡಿಲ್ಲದ ಕಾರಣ ನೀವು ನಿ.ಪಿ-55 ರ ವರದಿಯಲ್ಲಿ ನಮೂದಿಸಿಲ್ಲ?

ಉತ್ತರ: ನಿಮ್ಮ ಸೂಚನೆ ತಪ್ಪು.

ಪ್ರಶ್ನೆ: ನೀವು ದಿನಾಂಕ 14.07.2014 ರಂದು 6 ನೇ ಆರೋಪಿಯನ್ನು ಆತನ ತಾಯಿಯ ಮನೆಯಲ್ಲಿ ನಿಮ್ಮ ವಶಕ್ಕೆ ಪಡೆದಿರುವುದಿಲ್ಲ?

ಉತ್ತರ: ನಿಮ್ಮ ಸೂಚನೆ ತಪ್ಪು.

ಪ್ರಶ್ನೆಃ 6 ನೇ ಆರೋಪಿಯನ್ನು ವಶಕ್ಕೆ ಪಡೆದ ಮನೆಯು ಯಾವ ನಿಖರ ರಸ್ತೆಯಲ್ಲಿತ್ತು ಎಂಬ ಬಗ್ಗೆ ನುಡಿಯುವಿರಾ?

ಉತ್ತರಃ ಚುಂಚನಕಟ್ಟೆ ರಸ್ತೆ.

ಪ್ರಶ್ನೆಃ ದಿನಾಂಕ 24.07.2014 ರಂದು ನಿಮಗೆ ಪಾಸ್ ಪೋರ್ಟ್ ಅನ್ನು ಎಷ್ಟರ ಸಮಯಕ್ಕೆ ನೀಡಲಾಯಿತು?

ಉತ್ತರಃ ಬೆಳಗ್ಗೆ 8-00 ರ ಸಮಯಕ್ಕೆ ನೀಡಲಾಯಿತು.

ಪ್ರಶ್ನೆಃ ನೀವು ಎಸಿಪಿ ಕಛೇರಿಗೆ ಯಾವ ಸಮಯಕ್ಕೆ ಹೋದಿರಿ?

ಉತ್ತರಃ ಬೆಳಗ್ಗೆ 8-30 ರ ಸಮಯಕ್ಕೆ ಹೋದೆವು.

ಪ್ರಶ್ನೆಃ ನೀವು ಮೈಸೂರಿಗೆ ಬಸ್ಸಿನಲ್ಲಿ ಹೋದಿರೋ ಅಥವಾ ರೈಲಿನಲ್ಲಿ ಹೋದಿರೋ?

ಉತ್ತರಃ ರೈಲಿನಲ್ಲಿ ಹೋದೆವು.

ಪ್ರಶ್ನೆಃ ನೀವು ಮೈಸೂರಿಗೆ ತಲುಪಿ ಟಾಟಾ ಮೊಟಾರ್ರ್ಸ್ ಕಂಪೆನಿಯ ಬಳಿ ಹೋದಾಗ ಸಮಯ ಎಷ್ಟಾಗಿತ್ತು?

ಉತ್ತರಃ ಮಾಧ್ಯಹ್ನ 2-00 ಗಂಟೆ ಆಗಿತ್ತು.

ಪ್ರಶ್ನೆಃ ತನಿಖಾಧಿಕಾರಿ ನೀವು ಮೈಸೂರಿಗೆ ಹೋಗುವ ನಿಖಟ ಪೂರ್ವ ನಿಮಗೇನಾದರೂ ಪತ್ರವನ್ನೇನಾದರೂ ನೀಡಿದ್ದರೇ?

ಉತ್ತರಃ ಹೌದು ನೀಡಿದ್ದರು.

ಪ್ರಶ್ನೆಃ ನೀವು ಕಂಪೆನಿಯಿಂದ ಯಾರ್ಡ್ ಸ್ಥಳಕ್ಕೆ ಹೋದಾಗ ಸಮಯ ಎಷ್ಟಾಗಿತ್ತು?

ಉತ್ತರಃ ಸಮಯ 4-00 ಗಂಟೆಯಾಗಿತ್ತು.

ಪ್ರಶ್ನೆಃ ನಿ.ಪಿ-56 ರ ವರದಿಯ ಪ್ರಕಾರ ಟಾಟಾ ಮ್ಯಾಜಿಕ್ ವಾಹನದ ಫೋಟೋವನ್ನು ಯಾರು ತೆಗೆದರು?

ಉತ್ತರಃ ಸಿಬ್ಬಂದಿ ನಾರಾಯಣಸ್ವಾಮಿ ತೆಗೆದಿರುತ್ತಾರೆ.

ಪ್ರಶ್ನೆಃ ನಾರಾಯಣಸ್ವಾಮಿ ಯಾವುದನ್ನು ಉಪಯೋಗಿಸಿ ಫೋಟೋ ತೆಗೆದರು?

ಉತ್ತರಃ ಅವರ ಮೊಬೈಲ್ ನಲ್ಲಿ ತೆಗೆದಿರುತ್ತಾರೆ.

ಪ್ರಶ್ನೆಃ ನೀವು ಯಾವುದೇ ಫೋಟೋಗಳನ್ನು ನಿ.ಪಿ-56 ರ ವರದಿಯಂತೆ ತೆಗೆದಿಲ್ಲ?

ಉತ್ತರಃ ನಿಮ್ಮ ಸೂಚನೆ ತಪ್ಪು.

ಪ್ರಶ್ನೆಃ ಟಾಟಾ ಫೈನಾನ್ಸ್ ಸಂಸ್ಥೆಯ ಯಾವ ಅಧಿಕಾರಿ ನೀವು ನುಡಿದಂತೆ ದಾಖಲೆಗಳನ್ನು ನಿಮಗೆ ನೀಡಿದರು?

ಉತ್ತರಃ ಮ್ಯಾನೇಜರ್ ಅಧಿಕಾರಿ ನೀಡಿರುತ್ತಾರೆ.

ಪ್ರಶ್ನೆಃ ಪಾಸ್ ಪೋರ್ಟ್ ಅನ್ನು ಯಾವ ಉದ್ದೇಶದ ಕರ್ತವ್ಯಕ್ಕೆ ಪಡೆಯುತ್ತೆವೋ ಅಂತಹ ಕರ್ತವ್ಯ ಮುಗಿದ ಬಳಿಕ ಪಾಸ್ ಪೋರ್ಟ್ ನ ಪ್ರತಿಯನ್ನು ತನಿಖಾಧಿಕಾರಿಗೆ ವರದಿಯೊಂದಿಗೆ ಹಿಂತಿರುಗಿಸುವ ವಾಡಿಕೆಯಿದೆ?

ಉತ್ತರಃ ಹೌದು.

ಪ್ರಶ್ನೆಃ ನಿಮ್ಮ ತನಿಖಾಧಿಕಾರಿ ನೀವು ನುಡಿದಂತೆ ಯಾವುದೇ ಪಾಸ್ ಪೋರ್ಟ್ ಅನ್ನು ನಿಮಗೆ ನೀಡಿರುವುದಿಲ್ಲ ಕಾರಣ ಅಂತಹ ಪಾಸ್ ಪೋರ್ಟ್ ಪ್ರಕರಣದ ಕಡತದಲ್ಲಿ ಲಭ್ಯವಿಲ್ಲ?

ಉತ್ತರಃ ನಿಮ್ಮ ಸೂಚನೆ ತಪ್ಪು.

ಪ್ರಶ್ನೆಃ ನಿ.ಪಿ-55 ಮತ್ತು 56ರ ವರದಿ ನೀವು ನಿಮ್ಮ ತನಿಖಾಧಿಕಾರಿಯವರ ಮಾತಿನ ಮುಲಾಜಿಗೆ ನೀಡಿರುವಿರಿ?

ಉತ್ತರಃ ನಿಮ್ಮ ಸೂಚನೆ ತಪ್ಪು.

<u>ಪಾಟೀ ಸವಾಲುಃ ಉಳಿಕೆ ಆರೋಪಿತರ ಪರವಾಗಿಃ</u>

ಉಳಿಕೆ ಆರೋಪಿತರ ಪರ ವಕೀಲರು ತಮ್ಮದು ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ**.**

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.